**ಸಿ.ಸಿ. ನಂ. 398/2018**

**ಸಾಕ್ಷಿಃ ಸಿ.ಡಬ್ಲ್ಯೂಃ4 ಪಿ.ಡಬ್ಲ್ಯೂಃ 3**

ಸಾಕ್ಷಿದಾರನ ಹೆಸರು : ಎಂ ಕೆ ಕೇಶವಮೂರ್ತಿ

ತಂದೆಯ ಹೆಸರು : ಕೃಷ್ಣಮೂರ್ತಿ

ವಯಸ್ಸು : 52 ವರ್ಷ

ಉದ್ಯೋಗ : ಅಬಕಾರಿ ನಿರೀಕ್ಷಕರು, ಹಾಸನ ವಲಯ

ವಾಸಸ್ಥಳ : ಹಾಸನ

**ಸತ್ಯ ಪ್ರತಿಜ್ಞೆಯ ಮೇರೆಗೆ, ತಾಃ 20-02-2026**

**ಮುಖ್ಯ ವಿಚಾರಣೆಃ** ಎಪಿಪಿಯವರಿಂದ,

**ನಾನು** ದಿಃ**22-10-2018 ರಿಂದ 05-03-2021** ರವರೆಗೆ ಬೇಲೂರು ವಲಯದಲ್ಲಿ ಅಬಕಾರಿ ನಿರೀಕ್ಷಕನಾಗಿ **ಕರ್ತವ್ಯ** ನಿರ್ವಹಿಸಿರುತ್ತೇನೆ.

ದಿಃ 07-10-2017 ರಂದು ನಾನು ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಬೇಲೂರು ತಾಲ್ಲೂಕು ಕಸಬಾ ಹೋಬಳಿ, ಹಡುಮನಹಳ್ಳಿ ಗ್ರಾಮದ ಧ್ರಾಕ್ಷಾಯಿಣಿ ಃಉಃ ರೇಣುಕಮ್ಮ ಕೋಂ ಹುಚ್ಚೇಗೌಡ ಎಂಬಾಕೆ ಅಕ್ರಮವಾಗಿ ಕಳ್ಳಭಟ್ಟಿ ತಯಾರಿಸಿ ಮಾರಾಟ ಮಾಡುವ ಸಲುವಾಗಿ ದಾಸ್ತಾನು ಮಾಡಿರುವುದಾಗಿ ಮಾಹಿತಿ ಬಂದಿರುತ್ತದೆ. ನಂತರ ನಾನು ಮತ್ತು ಚಾಸಾ-3 ಮತ್ತು 5 ಮತ್ತು ಚಾಲಕ ಹಡುಮನಹಳ್ಳಿ ಗ್ರಾಮಕ್ಕೆ ಬಂದು ಅಲ್ಲೇ ಇದ್ದ ಗ್ರಾಮಸ್ಥರಾದ ಚಾಸಾ-1 ಮತ್ತು 2 ರವರಿಗೆ ನಾವು ಬಂದ ವಿಷಯವನ್ನು ತಿಳಿಸಿ ಪಂಚರಾಗಿ ಸಹಕರಿಸಬೇಕೆಂದು ಕೋರಿಕೊಂಡಾಗ ಅವರು ನಮ್ಮ ಜೊತೆ ಬಂದರು. ನಂತರ ಧ್ರಾಕ್ಷಾಯಿಣಿಯವರ ಮನೆಯನ್ನು ಪತ್ತೆಹಚ್ಚಿ ನಾವು ಪಂಚರೊಂದಿಗೆ ಹೋದಾಗ ಮನೆಯ ಬಾಗಿಲು ತೆರೆದಿತ್ತು. ಮನೆಯಲ್ಲಿ ಯಾರಾದರೂ ಇದ್ದೀರಾ ಎಂದು ಕೂಗಿ ಕರೆದಾಗ ಯಾರೂ ಬಾರದ ಕಾರಣ ಸುತ್ತಮುತ್ತಲಿನವರನ್ನು ವಿಚಾರಿಸಲಾಗಿ ಸದರಿ ಮನೆ ಧ್ರಾಕ್ಷಾಯಿಣಿಯವರ ಮನೆಯಾಗಿದ್ದು ಈಗಷ್ಟೇ ಮನೆಯಿಂದ ಹೊರಗೆ ಹೋಗಿರುತ್ತಾರೆ ಎಂದು ತಿಳಿಸಿರುತ್ತಾರೆ. ಮನೆಯನ್ನು ಶೋಧಿಸಲು ಕಾಲಾವಕಾಶ

ಇಲ್ಲದ ಕಾರಣ ಅಬಕಾರಿ ಕಾಯ್ದೆ ಕಲಂ 54 ರಡಿ ಶೋಧನಾ ವಾರೆಂಟನ್ನು ತಯಾರಿಸಿಕೊಂಡು ಅಂಗಶೋಧನೆ ಮಾಡಿಕೊಂಡು ಮನೆಯನ್ನು ಶೋಧಿಸಿದಾಗ ವಾಸದ ಮನೆಗೆ ಹೊಂದಿಕೊಂಡಂತಿರುವ ಬಚ್ಚಲು ಮನೆಯಲ್ಲಿ 5 ಲೀ ಸಮರ್ಥ್ಯದ ಪ್ಲಾಸ್ಟಿಕ್ ಕ್ಯಾನ್ ನಲ್ಲಿ 5 ಲೀ ಕಳ್ಳಭಟ್ಟಿ ಸಾರಾಯಿ, 15 ಲೀ ಸಾಮರ್ಥ್ಯದ ಪ್ಲಾಸ್ಟಿಕ್ ಕೊಡದಲ್ಲಿ 15 ಲೀ ಬೆಲ್ಲದ ಕೊಳೆ ಇರುವುದು ಕಂಡುಬಂದಿರುತ್ತದೆ. ದೊರೆತ ಸ್ವತ್ತುಗಳಿಂದ ತಲಾ 500 ಮಿಲಿಯಷ್ಟು ಕಳ್ಳಭಟ್ಟಿ ಸಾರಾಯಿ ಮತ್ತು ಬೆಲ್ಲದ ಕೊಳೆಯನ್ನು ರಾಸಾಯನಿಕ ಪರೀಕ್ಷೆಗೆ ತೆಗೆದು ಅವುಗಳಿಗೆ ದಾರ ಸುತ್ತಿ ಬಟ್ಟೆ ಕಟ್ಟಿ ಇಲಾಖಾ ಸೀಲಿನಿಂದ ಮೊಹರು ಮಾಡಲಾಯಿತು. ಮಹಜರನ್ನು 2.15 ರಿಂದ 3.30 ರವರೆಗೆ ತಯಾರಿಸಲಾಯಿತು. ನಂತರ ಕಛೇರಿಗೆ ಬಂದು ಆರೋಪಿಯ ವಿರುದ್ಧ ಪ್ರವವ ವನ್ನು ತಯಾರಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಳ್ಳಲಾಯಿತು.

ತನಿಖೆ ಮುಂದುವರೆಸಿ ದಿಃ 13-10-2017 ರಂದು ಚಾಸಾ-5 ರವರ ಮುಾಲಕ ಮಾದರಿಯನ್ನು ರಾಸಾಯನಿಕ ವಿಶ್ಲೇಷಣೆಗೆ ಕಳುಹಿಸಿಕೊಟ್ಟಿರುತ್ತೇನೆ. ರಾಸಾಯನಿಕ ವರದಿಯನ್ನು ದಿಃ 26-12-2017 ರಂದು ತಂದುಕೊಟ್ಟಿದ್ದು ಅದನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಮನೆಯ ಮಾಲೀಕತ್ವ ಕೋರಿ ಚಾಸಾ-7 ರವರಿಗೆ ದಿಃ 13-10-2017 ರಂದು ಪತ್ರ ಬರೆದಿರುತ್ತೇನೆ. ಚಾಸಾ-7 ರವರು ದಿಃ 07-11-2017 ರಂದು ಮನೆಯ ಮಲೀಕತ್ವ ಹುಚ್ಚೇಗೌಡ ಎಂಬುವರ ಹೆಸರಿನಲ್ಲಿ ಇದೆ ಎಂದು ದಾಖಲೆ ನೀಡಿರುತ್ತಾರೆ.

ತನಿಖೆ ಪೂರ್ಣಗೊಳಿಸಿ ದಿಃ 25-01-2018 ರಂದು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿ ನಿಪಿ-1 ಮತ್ತು 2 ರಲ್ಲಿರುವ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-1ಸಿ, 2ಸಿ ಎಂದು ಗುರುತಿಸಲಾಯಿತು. ಸಾಕ್ಷಿ ಗುರುತಿಸಿದ ಶೋಧನಾ ವಾರೆಂಟನ್ನು ನಿಪಿ-3, ಸಾಕ್ಷಿ ಸಹಿ ನಿಪಿ-3ಎ, ಪ್ರವವ ನಿಪಿ-4, ಸಾಕ್ಷಿ ಸಹಿ ನಿಪಿ- 4ಎ, ರಾಸಾಯನಿಕ ವಿಶ್ಲೇಷಕರಿಗೆ ಬರೆದ ಪತ್ರ ನಿಪಿ-5, ಸಹಿ ನಿಪಿ-5ಎ, ರಾಸಾಯನಿಕ ವರದಿ ನಿಪಿ-6, ಸಾಕ್ಷಿ ಸಹಿ ನಿಪಿ-6ಎ , ಚಾಸಾ-7 ರವರಿಗೆ ಬರೆದ ಪತ್ರ ನಿಪಿ-7, ಸಾಕ್ಷಿ ಸಹಿ ನಿಪಿ-7ಎ, ಚಾಸಾ-7 ರವರು ನೀಡಿದ ವರದಿ ನಿಪಿ-8, ಸಹಿ ನಿಪಿ-8ಎ ಎಂದು ಗುರುತಿಸಲಾಯಿತು. ರಾಸಾಯನಿಕ ಪರೀಕ್ಷೆಗೆ ಮಾದರಿ ತೆಗೆದ ಎರಡು ಬಾಟಲುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಮುಮಾ-1 ಮತ್ತು 2 ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದಲ್ಲಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ</u> **ಆರೋಪಿ ಪರ ಶ್ರೀ ಸಿ ಎಂ ಪಿ ವಕೀಲರಿಂದ**

ನಾನು ಠಾಣೆಯಲ್ಲಿ ಇದ್ದಾಗ ನನಗೆ ಮಧ್ಯಾಹ್ನ 1.30 ಗಂಟೆಗೆ ಮಾಹಿತಿ ಬಂದಿರುತ್ತದೆ. ಠಾಣೆಯಿಂದ ಹಡುಮನಹಳ್ಳಿ ಗ್ರಾಮ 13 ಕಿ ಮೀ ದೂರ ಇದೆ. ಸದರಿ ಗ್ರಾಮಕ್ಕೆ ಗೆಂಡೇಹಳ್ಳಿ ಮಾರ್ಗವಾಗಿ ಹೋಗಿರುತ್ತೇವೆ. ಸದರಿ ಗ್ರಾಮಕ್ಕೆ ಹೋದಾಗ 1.50–2.00 ಆಗಿರುತ್ತದೆ. ಪಂಚರನ್ನು ನೇಮಿಸಿಕೊಂಡಾಗ ಸಮಯ 1.50 ಆಗಿತ್ತು. ಮಹಜರನ್ನು ನಾನೇ ಬರೆದಿರುತ್ತೇನೆ. ಆರೋಪಿಯ ಮನೆಯ ಹತ್ತಿರ ಹೋದಾಗ ಸಮಯ 2.00 ಗಂಟೆ ಆಗಿತ್ತು. ಆರೋಪಿಯ ಮನೆಯ ಚಹರೆ ಹಂಚಿನ ಮನೆಯಾಗಿತ್ತು. ಮನೆಯ ಚಹರೆಯನ್ನು ಮಹಜರ್ ನಲ್ಲಿ ಬರೆದಿರುವುದಿಲ್ಲ. ಸರ್ಚ್ ವಾರೆಂಟನ್ನು 2 ಗಂಟೆಗೆ ತಯಾರಿಸಿಕೊಂಡಿರುತ್ತೇವೆ. ಸರ್ಚ್ ವಾರೆಂಟ್ ನಲ್ಲಿ ತಯಾರಿಸಿದ ಸಮಯ 1.30 ಎಂದು ನಮೂದಿಸಿರುತ್ತೇನೆ. ಸರ್ಚ್ ವಾರೆಂಟ್ ನಲ್ಲಿ ಸಮಯ 1.15 ಎಂದು ನಮೂದಾಗಿರುತ್ತದೆ ಎಂದರೆ ಸಾಕ್ಷಿಯು ಕೈ ಬರಹದ ತಪ್ಪಿನಿಂದ ಹಾಗೆ ಆಗಿರುತ್ತದೆ ಎಂದು ನುಡಿಯುತ್ತಾರೆ. ಆರೋಪಿ ಮನೆಯ ದಕ್ಷಿಣ ದಿಕ್ಕಿನಲ್ಲಿ ಬಚ್ಚಲ ಮನೆ ಇತ್ತು. ಈ ಬಗ್ಗೆ ಮಹಜರ್ ನಲ್ಲಿ ಬರೆದಿರುವುದಿಲ್ಲ. ಪ್ಲಾಸ್ಟಿಕ್ ಕೊಡದ ಬಣ್ಣ ನೆನಪಿಲ್ಲ, ಈ ಬಗ್ಗೆ ಮಹಜರ್ ನಲ್ಲಿ ಬರೆದಿಲ್ಲ. ಅದೇ ರೀತಿ ಪ್ಲಾಸ್ಟಿಕ್ ಕ್ಯಾನ್ ನ ಬಣ್ಣ ಮಹಜರ್ ನಲ್ಲಿ ಬರೆದಿಲ್ಲ. ಬಾಟಲ್ ಗಳಿಗೆ ಚೀಟಿ ಅಂಟಿಸಿ ಪಂಚರ ಸಹಿ ಪಡೆದುಕೊಂಡಿರುತ್ತೇನೆ.

ದಿಃ 07–10–2017 ರಂದು ಹಡುಮನಹಳ್ಳಿ ಗ್ರಾಮಕ್ಕೆ ಹೋಗಿ ಯಾವುದೇ ದಾಳಿ ಮಾಡಿಲ್ಲ, ಮಹಜರ್ ತಯಾರಿಸಿಲ್ಲ ಮತ್ತು ಈ ಪ್ರಕರಣಕ್ಕೂ ಆರೋಪಿಗೂ, ಮುದ್ದೆಮಾಲಿಗೂ, ಮನೆಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಯಾವುದೇ ಮುದ್ದೆ ಮಾಲುಗಳನ್ನು ರಾಸಾಯನಿಕ

ಪರೀಕ್ಷೆಗೆ ಕಳುಹಿಸಿಲ್ಲ ಎಂದರೆ ಸರಿಯಲ್ಲ ಮತ್ತು ಯಾವುದೇ ರಾಸಾಯನಿಕ ಪರೀಕ್ಷಾ ವರದಿ ಸ್ವೀಕರಿಸಿಲ್ಲ ಎಂದರೆ ಸರಿಯಲ್ಲ. ಕಳ್ಳೇರಿ ಗ್ರಾಮ ಪಂಚಾಯ್ತಿಗೆ ಮನೆಯ ಮಾಲೀಕತ್ವ ಕೋರಿ ಯಾವುದೇ ಪತ್ರ ಬರೆದಿಲ್ಲ ಎಂದರೆ ಸರಿಯಲ್ಲ. ಠಾಣೆಯಲ್ಲೇ ಕುಳಿತು ಎಲ್ಲ ದಾಖಲೆಗಳನ್ನು ಬರೆದಿರುತ್ತೇನೆ ಎಂದರೆ ಸರಿಯಲ್ಲ. ಇಲಾಖಾ ಸಾಕ್ಷಿಯಾದ ಕಾರಣ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಮರ್ಪಕ ತನಿಖೆ ಮಾಡದೇ ಸುಳ್ಳು ದೋಷಾರೋಪಣ ಪಟ್ಟಿಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾ.ದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಅದೆ.

(ನಾಗೇಂದ್ರ)
ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ. ನ್ಯಾಯಾಲಯ ಬೇಲೂರು